**ರಾಮಲಿಂಗಾ ರೆಡ್ಡಿ**
ಸಾರಿಗೆ ಸಚಿವರು ಹಾಗೂ
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ : (ಕ) : 22371240
22034010
ನಿವಾಸ : 22237240
ಕೊಠಡಿ ಸಂಖ್ಯೆ: 141, 142
ಮೊದಲನೇ ಮಹಡಿ, ವಿಕಾಸ ಸೌಧ
ಬೆಂಗಳೂರು

ದಿನಾಂಕ: 11/07/2016

## ಸಂದೇಶ

ಅಂತರ್ಜಾಲ (Internet) ಇಂದು ಸಾರ್ವಜನಿಕ ಬದುಕಿನ ಒಂದು ಭಾಗವಾಗಿದೆ. ಪ್ರತಿಯೊಬ್ಬರೂ ತಮ್ಮ ಬೆರಳತುದಿಯಲ್ಲಿ ಮಾಹಿತಿಯನ್ನು ಪಡೆಯಲು ಉತ್ಸುಕರಾಗಿದ್ದಾರೆ. ಇಂತಹ ಸನ್ನಿವೇಶದಲ್ಲಿ ಸಾರಿಗೆ ಇಲಾಖೆಯು ತನ್ನ ಸಾರ್ವಜನಿಕ ಸ್ನೇಹಿ ಜಾಲತಾಣ(Website)ವನ್ನು ಮರುವಿನ್ಯಾಸಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಸಮರ್ಪಿಸುತ್ತಿರುವ ಈ ಸಂದರ್ಭದಲ್ಲಿ ಇಲಾಖೆಗೆ ಶುಭವನ್ನು ಹಾರೈಸುತ್ತೇನೆ. ಸಾರಿಗೆ ಇಲಾಖೆಗೆ ಸಂಬಂಧಿಸಿದ ಅನೇಕ ಮಾಹಿತಿಯನ್ನು ಸಾರ್ವಜನಿಕರು ನೇರವಾಗಿ ಜಾಲತಾಣಕ್ಕೆ ಭೇಟಿ ನೀಡಿ ಪಡೆಯಬಹುದಾಗಿರುತ್ತದೆ. ಇದರಿಂದ ಸಾರ್ವಜನಿಕರು ಮಾಹಿತಿಗಾಗಿ ಕಛೇರಿಗೆ ಸುತ್ತಾಡುವ ಅಗತ್ಯವಿಲ್ಲದೆ ಕುಳಿತಲ್ಲಿಯೇ ಮಾಹಿತಿಯನ್ನು ಪಡೆಯಲು ಸಾಧ್ಯವಾಗುವಂತೆ ನೂತನ ತಂತ್ರಾಂಶವನ್ನು ಅಳವಡಿಸಿ ಜಾಲತಾಣವನ್ನು ರೂಪಿಸಿರುವುದು ಪ್ರಶಂಸನೀಯ.

ಸಾರ್ವಜನಿಕರು ಈ ಜಾಲತಾಣದ ಸೇವೆಯನ್ನು ಹೆಚ್ಚು ಹೆಚ್ಚು ಪಡೆಯುವಂತಾಗಲಿ, ತನ್ಮೂಲಕ ಇಲಾಖೆಯ ಶ್ರಮ ಸಾರ್ಥಕವಾಗಲಿ ಎಂಬುದಾಗಿ ಹಾರೈಸುತ್ತೇನೆ.

(ರಾಮಲಿಂಗಾ ರೆಡ್ಡಿ)